IJHA
Indian Journal of History and Archaeology

Indian Journal of History and Archaeology

ISSN (E):2582-225X
VOL-1 ,ISSUE -5, JAN-FEB, 2020, 49-58

# ಚಿಕ್ಕಬಳ್ಳಾಪುರ ತಾಲ್ಲೂಕಿನ ಚಾರಿತ್ರಿಕ ನೋಟ: ಒಂದು ಅವಲೋಕನ

ಪ್ರೇಮ ಕೆ.ಸಿ

ಪ್ರೇಮ ಕೆ.ಸಿ
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,ಮೈಸೂರು

ಪ್ರತಿಯೊಂದು ಪ್ರದೇಶದ ಚಾರಿತ್ರಿಕ ನೆಲೆ ಹಿನ್ನೆಲೆಯನ್ನು ಅಧ್ಯಯನ ಮಾಡುವಾಗ ಅದರ ಅವಲೋಕನವು ಮಹತ್ವದಿಂದ ಕೂಡಿರುವಂಥ ಅರ್ಥನಿರೂಪಣೆಯು ಅತಿಮುಖ್ಯವೇ ಆಗಿರುತ್ತದೆ. ಹಾಗಾಗಿಯೇ ಪ್ರಸ್ತುತ ಲೇಖನದ ಕೇಂದ್ರ ವಸ್ತುವಿಷಯವೇ ಆಗಿರುವಂಥ ಈ ಚಿಕ್ಕಬಳ್ಳಾಪುರದ ಐತಿಹಾಸಿಕ ಚಾರಿತ್ರಿಕ ನೆಲೆಯನ್ನು ಹಿನ್ನೆಯನ್ನು ಒಳಹೊಕ್ಕಿ ಪರಿವೀಕ್ಷಿಸಿದಾಗ; ಈ ಚಿಕ್ಕಬಳ್ಳಾಪುರದ ಮೂಲತಃ ಹೆಸರು ಚಿನ್ನಬಳ್ಳಾಪುರ ಎಂದಾಗಿತ್ತು. ಇದನ್ನು ಆ ಪ್ರಾಂತ್ಯದ ಜನಸಾಮಾನ್ಯರ ಭಾಷೆಗಳೇ ಆಗಿರುವಂಥ ತೆಲುಗು, ತಮಿಳು ಭಾಷೆಯಲ್ಲಿ ಚಿನ್ನ ಅಂದರೆ, ಸಣ್ಣ ಅಥವಾ ಚಿಕ್ಕ ಎಂಬಂಥ ಅರ್ಥವೂ ಕೂಡ ಬರುತ್ತದೆ. ಅಂತೆಯೇ, ಬಳ್ಳಾ ಅಂದರೆ, ಆಹಾರ ಧಾನ್ಯಗಳನ್ನು ದೇಶಿಯರು ಅಳೆಯುವ ಒಂದು ಅಳತೆಗೆ ಬಳಸುವಂಥ ಸಾಧನೆಯೇ ಆಗಿದೆ. ಹಾಗೆಯೇ, ಪುರ ಅಂದರೆ, ಪಟ್ಟಣ ಎಂಬಂಥ ಅರ್ಥವೂ ಬರುತ್ತದೆ. ಹಾಗಾಗಿ ಕ್ರಮೇಣವಾಗಿ ಚಿನ್ನಬಳ್ಳಾಪುರಂ ಮುಂದಿನ ದಿನಗಳಲ್ಲಿ ಹಾಡು ಭಾಷೆಯಲ್ಲಿ ಚಾಲ್ತಿಗೆ ಬಂದಿರುವ ಪರಿಣಾಮವಾಗಿ ಕನ್ನಡದಲ್ಲಿ ಚಿಕ್ಕಬಳ್ಳಾಪುರ ಎಂದು ಬದಲಾಗಿದೆ ಎಂದು ಪ್ರಸ್ತುತ ತನ್ನದೇ ಆದಂಥ ಚರಿತ್ರೆಯನ್ನು ಹೊಂದಿರುತ್ತದೆ.

**ಜನಪ್ರಿಯ ಪುರಾಣದ ಪ್ರಕಾರ;** ಅವತಿಯುಳ್ಳ ಬೈರಗೌಡ ಎಂಬಂಥ ಮುಖ್ಯಸ್ಥರ ಮನನಾಗಿದ್ದಂಥ ಮರಿಗೌಡ ತನ್ನ ತಂದೆಯ ಜೊತೆಗೆ ಒಂದು ದಿನ ಕೊಡಿಮಂಚಹಳ್ಳಿ ಅರಣ್ಯದಲ್ಲಿ ಬೇಟೆಗಾಗಿ ಹೋದಾಗ ಒಂದು ಮೊಲವು ಬೇಟೆ ನಾಯಿಗಳ ಮುಂದೆ ಯಾವ ಭಯವಿಲ್ಲದೇ ಬಂದು ನಿಂತಿರುವುದನ್ನು ಕಂಡಿರುತ್ತಾನೆ. ಇದರಿಂದ ಹರ್ಷಚಿತ್ತನಾಗಿರುವಂಥ ತಂದೆಯು ಮಗನಿಗೆ ಈ ಮೊಲವು ಧೈರ್ಯದ ಸಂಕೇತವೇ ಆಗಿರುತ್ತದೆ. ಹಾಗಾಗಿಯೇ, ಇದು ಇಲ್ಲಿನ ಸ್ಥಳೀಯ ಜನವರ್ಗಗಳ ಧೈರ್ಯವನ್ನು ಪ್ರಖರವಾಗಿ ಪ್ರತಿಬಿಂಬಿಸುತ್ತದೆ ಎಂದು

ಹೇಳಿದನು. ಅನಂತರ ಆತನು ಈ ಪ್ರದೇಶವನ್ನು ಆಳ್ವಿಕೆಯನ್ನು ಮಾಡುತ್ತಿದ್ದಂಥ ವಿಜಯನಗರ ಸಾಮ್ರಾಜ್ಯದ ಅರಸರ ಅನುಮತಿ ಪಡೆದು ಇಲ್ಲಿ ಒಂದು ಕೋಟೆಯನ್ನು ಹಾಗೂ ಪಟ್ಟಣವನ್ನು ನಿರ್ಮಾಣ ಮಾಡಿರುತ್ತಾನೆ. ಅನಂತರ ಕಾಲಕ್ರಮಿಸಿದಂತೆ ಈ ಚಿಕ್ಕಬಳ್ಳಾಪುರ ಪಟ್ಟಣವು ಅಭಿವೃದ್ಧಿಯತ್ತ ಸಾಗಿಬಂದಿರುತ್ತದೆ. ಹಾಗೆಯೇ, ಮುಂದುಬರೆದಂತೆ ಬೈಚೆಗೌಡ ಎಂಬುವವನ್ನು ಆಳ್ವಿಕೆ ಮಾಡುತ್ತಿದ್ದನು. ಆ ಕಾಲಸಂದರ್ಭದಲ್ಲಿ ಮೈಸೂರು ಆಳರಸರು ಈ ಚಿಕ್ಕಬಳ್ಳಾಪುರ ಕೋಟೆಯನ್ನು ಆಕ್ರಮಿಸಿಕೊಂಡರು. ಆದರೆ, ಮರಾಠರ ಹಸ್ತಕ್ಷೇಪದಿಂದ ಮತ್ತೇ ಈ ಚಿಕ್ಕಬಳ್ಳಾಪುರ ಪಟ್ಟಣವು ಬೈಚೆಗೌಡನ ಆಳ್ವಿಕೆಯಲ್ಲಿಯೇ ಉಳಿಸಿಕೊಂಂಡಿತ್ತು. ಈ ಚಿಕ್ಕಬಳ್ಳಾಪುರ ಪ್ರದೇಶಗಳು ಮೈಸೂರು ಸಂಸ್ಥಾನದ ನಿಯಂತ್ರಣಕ್ಕೆ ಒಳಪಟ್ಟಿತ್ತು. ಇದು 1762ರ ಚಿಕ್ಕಪ್ಪನಾಯಕನ ಆಳ್ವಿಕೆಯ ಕಾಲದವರೆಗೆ ಮೈಸೂರು ಆಳಸರ ವಶದಲ್ಲಿಯೇ ಇತ್ತು. ಆ ಸಮಯದಲ್ಲಿ ಮತ್ತೊಮ್ಮೆ ಹೈದರ್ಆಲಿ ಮೂರು ತಿಂಗಳು ಕಾಲ ಈ ಚಿಕ್ಕಬಳ್ಳಾಪುರ ಪಟ್ಟಣವನ್ನು ಮುತ್ತಿಗೆ ಹಾಕಿದ್ದನು. ಹಾಗಾಗಿ, ಚಿಕ್ಕಪ್ಪನಾಕ ಹೈದರ್ಆಲಿಗೆ 5 ಲಕ್ಷದಷ್ಟು ಪಗೋಡ ಕೊಡಲು ಒಪ್ಪಿದ್ದನು. ಆದ್ದರಿಂದಲೇ, ಹೈದರ್ ಆಲಿ ತನ್ನ ಸೈನ್ಯವನ್ನು ವಾಪಸ್ಸು ಈ ಪಟ್ಟಣದಿಂದ ಹಿಂದಕ್ಕೆ ಪಡೆದುಕೊಂಡನು. ತದನಂತರ ಚಿಕ್ಕಪ್ಪನಾಯಕನು ಗೋಟಿಯ ಮುರಾರಿಯರ ಸಹಾಯವನ್ನು ಪಡೆದು ಮರಳಿ ತಮ್ಮ ಅಧಿಕಾರವನ್ನು ಪಡೆಯಲು ಪ್ರಯತ್ನಿಸಿದನು. ಅದಕ್ಕಾಗಿ ನಂದಿಬೆಟ್ಟದಲ್ಲಿ ಗುಪ್ತ ಮಾತುಕತೆಯನ್ನು ಕೂಡ ನಡೆಸುತ್ತಿದ್ದಾಗ ಹೈದರ್ ಆಲಿಯು ಮತ್ತೇ ಈ ಚಿಕ್ಕಬಳ್ಳಾಪುರ ಪಟ್ಟಣವನ್ನು ಆಕ್ರಮಣ ಮಾಡುವ ಮೂಲಕವಾಗಿಯೇ ಚಿಕ್ಕಪ್ಪನಾಯಕನನ್ನು ಬಂಧಿಸಿದ್ದನು. ಆದರೆ, ಬ್ರಿಟಿಷರ ಅಧಿಕಾರಿಯಾಗಿದ್ದಂಥ ಲಾರ್ಡ್ ಕಾರ್ನ್‌ವಾಲಿಸ್‌ನ ಹಸ್ತಕ್ಷೇಪದಿಂದ ಮರಳಿ ಈ ಚಿಕ್ಕಬಳ್ಳಾಪುರವನ್ನು ನಾರಾಯಣಗೌಡ ಎಂಬುವನಿಗೆ ಅಧಿಕಾರ ನೀಡಲಾಯಿತು. 1791ರವರೆಗೆ ಅಂದರೆ, ಟಿಪ್ಪು ಸುಲ್ತಾನ್ ನಂದಿಬೆಟ್ಟವನ್ನು ಆಕ್ರಮಿಸುವವರೆಗೆ ಆಳ್ವಿಕೆ ಮಾಡಿದರೆ, ಬ್ರಿಟಿಷರು ಮತ್ತು ಟಿಪ್ಪು ಸುಲ್ತಾನ್ ನಡುವಿನ ಹೋರಾಟದಿಂದ ನಾರಾಯಣಗೌಡ ತನ್ನ ಆಡಳಿತದ ಅಧಿಕಾರವನ್ನು ಕಳೆದುಕೊಂಡನು. ತದನಂತರ ಬ್ರಿಟಿಷರು ಟಿಪ್ಪು ಸುಲ್ತಾನ್‌ನನ್ನು ಸೋಲಿಸಿದ ಅನಂತರ ಈ ಚಿಕ್ಕಬಳ್ಳಾಪುರ ಪಟ್ಟಣವೂ ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟಿರುತ್ತದೆ.

ಚಿಕ್ಕಬಳ್ಳಾಪುರ ತಾಲ್ಲೂಕಿನ ಪ್ರಸಿದ್ಧ ಗಿರಿಧಾಮವು ಒಂದು ಐತಿಹಾಸಿಕವಾದಂಥ ಸ್ಥಳವೇ ಆಗಿರುತ್ತದೆ. ಬೆಂಗಳೂರಿನಿಂದ 60 ಕಿಲೋಮೀಟರ್ ದೂರದಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಕಸಬಾ ಹೋಬಳಿಯಿಂದ ನೈಋತ್ಯಕ್ಕೆ 8 ಕಿಲೋಮೀಟರ್ ದೂರದಲ್ಲಿ ಇದೆ. ನಂದಿ ಗಿರಿಧಾಮವೆನ್ನುತ್ತಲೇ ಅಲ್ಲಿನ ತಂಪಾದ ಹವೆ, ಎತ್ತರವಾದ ವೃಕ್ಷರಾಶಿ, ಹೃದಯ ತಣಿಸುವ ಹಸಿರುರಾಶಿ ಎಲ್ಲರ ನೆನಪಿನಲ್ಲೂ ಎದ್ದು ನಿಲ್ಲುತ್ತದೆ. ಆದರೆ, ಇವೆಲ್ಲಕ್ಕಿಂತಲೂ ಮಿಗಿಲಾಗಿ ಕಗ್ಗಲ್ಲಿನಲ್ಲಿ ತಲೆಯ ಬಲೆಯನ್ನು ನೇಯ್ದು ನಿರ್ಮಿಸಲಾಗಿರುವ, ಬೆಟ್ಟದ ಮೇಲಿನ ಯೋಗ ನಂದೀಶ್ವರ ದೇವಾಲಯ ಮತ್ತು ಬೆಟ್ಟದ ಕೆಳಗಡೆ ಇರುವ ನಂದಿ ಗ್ರಾಮದ

ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರ ಜೋಡಿ ದೇವಾಲಯಗಳಲ್ಲಿನ ಶಿಲ್ಪಕಲೆಯು ತನ್ನದೇ ಆದಂಥ ಅದ್ಭುತವಾದಂಥ ಕೌತುಕಗಳಾಗಿ ಪ್ರವಾಸಿಗರನ್ನು ನಿರಂತರವಾಗಿ ಸೆರೆಯನ್ನು ಹಿಡಿಯುತ್ತಿವೆ.

ಬಾಣ ಗಂಗರಸರ ಸೈನಿಕ ನೆಲೆಯಲ್ಲಿ ಹೆಸರಾದ ನಂದಿಕ್ಷೇತ್ರವು ತ್ರೇತಾಯುಗದಷ್ಟು ಪುರಾತನ ಕೇಂದ್ರವಾಗಿತ್ತೆಂದು ನಂಬಲಾಗಿದೆ. ಅದರ ಸ್ಥಳ ಮಹಾತ್ಮೆಯನ್ನು ಬೃಹ್ಮಾಂಡ ಪುರಾಣದ 27 ಅಧ್ಯಾಯಗಳಲ್ಲಿ ವೈಭವೀಕರಿಸಿ ವರ್ಣಿಸಲಾಗಿದೆ. ಶಿವನ ಶಾಪಕ್ಕೆ ಗುರಿಯಾದ ನಂದಿಯು ಕ್ಷಾಮದಿಂದ ತತ್ತರಿಸುತ್ತಿದ್ದ ಭೂಲೋಕದಲ್ಲಿ ಸಂಚರಿಸುವ ಸಮಯದಲ್ಲಿ ದೇವಲೋಕದ ಕಾಮಧೇನು ಹರಿಸಿದ ಹಾಲಿನ ಪ್ರವಾಹವೇ ಕ್ಷೀರನದಿಯಾಗಿರುತ್ತದೆ ಎಂಬುದು ವಾಡಿಕೆಯಿದೆ. ಕ್ಷಾಮದಿಂದ ಬಳಲಿದ್ದ ಜನ ಹಾಲು ಕುಡಿದು ಸಂತೃಪ್ತರಾದರಂತೆ ಎಂಬುದು ಈಗಾಗಲೇ ನಡೆದಿರುವಂಥ ಅನೇಕ ಅಧ್ಯಯನ ಹಾಗೂ ಸಮೀಕ್ಷೆಗಳಲ್ಲಿ ದಾಖಲೀಕರಣಗೊಳಿಸಲಾಗಿರುತ್ತದೆ.

ನಂದಿ ಕ್ಷೇತ್ರವು ಪೌರಾಣಿಕವಾಗಿಯೂ ಹಾಗೂ ಚಾರಿತ್ರಿಕವಾಗಿಯೂ ವಿಶೇಷ ಮಹತ್ವನ್ನು ಪಡೆದಿರುತ್ತದೆ. ಹಾಗೆಯೇ ಈ ನಂದಿ ಕ್ಷೇತ್ರವೂ ತನ್ನನ್ನು ಸಂದರ್ಶಿಸಲು ದೇಶ ವಿದೇಶಗಳಿಂದಲೂ ಪ್ರವಾಸಿಗರನ್ನು ರಮಣೀಯವಾಗಿಯೇ ಆಕರ್ಷಿಸುತ್ತಿದೆ. ಈ ಕ್ಷೇತ್ರವು ತ್ರೇತಾಯುಗದಲ್ಲಿ ಶ್ರೀರಾಮನು ಮಂಗಗಳ ಸೈನ್ಯದಿಂದ ಲಂಕೆಗೆ ಲಗ್ಗೆ ಹಾಕಲು ಅನುಕೂಲಕರವಾಗಿ ಸಾಗರಕ್ಕೆ ಒಂದು ಸೇತುವೆಯನ್ನು ನಿರ್ಮಿಸುತ್ತಿದ್ದಾಗ ಬ್ರಹ್ಮನ ಅಪ್ಪಣೆಯಂತೆ ಇಂದ್ರಾದಿ ದೇವತೆಗಳು ಸೇತುವೆಯ ನಿರ್ಮಾಣಕ್ಕೆ ನೆರವಾಗಲು ಮೇರು ಪರ್ವತದಿಂದ ತಂದು ಐದು ಶಿಖರಗಳನ್ನು ಸೇತುವೆಯ ನಿರ್ಮಾಣವು ಪೂರ್ಣವಾದುದ್ದರಿಂದ ದಂಡಕಾರಣ್ಯದಲ್ಲಿ ಇಳಿಸಿದರೆಂದೂ, ಹಾಗೆ ಇಳಿಸಿದ ಪಂಚಗಿರಿಗಳೇ ನಂದಿಗಿರಿ. ಬ್ರಹ್ಮಗಿರಿ, ಸ್ಕಂದಗಿರಿ, ದಿವ್ಯಗಿರಿ ಮತ್ತು ವಿಷ್ಣುಗಿರಿಗಳೆಂದು ಇಂದಿಗೂ ಅದೇ ಮಾದರಿಯ ಪ್ರತೀತಿ ಇದೆ. ನಂದಿಗಿರಿಯಲ್ಲಿ ಯೋಗನಂದೀಶ್ವರನು ಪ್ರಸನ್ನ ಪಾರ್ವತಿ ಸಹಿತ ನೆಲೆನಿಂತು ಭಕ್ತ ಜನರ ಆಕರ್ಷಣೆಯಾಗಿದ್ದಾನೆ. ಜೊತೆಗೆ ವೀರಭದ್ರಸ್ವಾಮಿಯಂಥ ದೇವರುಗಳು, ಅಮೃತ ಸರೋವರ ಹಾಗೂ ಅಷ್ಟತೀರ್ಥಗಳಿಂದ ಇದು ಪ್ರಸಿದ್ಧ ಯಾತ್ರಾಸ್ಥಳವಾಗಿಯೇ ಹೆಸರು ಪಡೆದಿದೆ. ದಿವ್ಯಗಿರಿಯಲ್ಲಿ ಶ್ರೀ ದಿವ್ಯಗಿರಿಸ್ವಾಮಿ ಅಮ್ಮನವರು ಸಹಿತ ನೆಲೆಗೊಂಡಿದ್ದಾನೆ. ಬ್ರಹ್ಮಗಿರಿಯಲ್ಲಿ ಬ್ರಹ್ಮನಿಂದ ಪ್ರತಿಷ್ಠಿತವಾದ ಬ್ರಹ್ಮೇಶ್ವರಸಾಮಿ ಇದ್ದು, ವಿಷ್ಣುಗಿರಿಯಲ್ಲಿ ಶ್ರೀಕೇಶವಸ್ವಾಮಿ ಸ್ವಯಂ ವ್ಯಕ್ತವಾದ ಮೂರ್ತಿಯಾಗಿದ್ದು, ವಿಷ್ಣುಶೈಲ ಎಂಬುದಾಗಿ ಪ್ರಸಿದ್ಧಿ ಪಡೆದಿರುತ್ತದೆ. ಸ್ಕಂದಗಿರಿಯಲ್ಲಿ ಷಣ್ಮುಖ ಮತ್ತು ವಿನಾಯಕನು ಜೊತೆಗೂಡಿದ್ದಾರೆ. ಈ ಎಲ್ಲವೂಗಳಿಂದ ಈ ಸ್ಥಳವೂ ತನ್ನದೇ ಆದಂಥ ಪ್ರತೀತಿಯನ್ನು ಪಡೆದುಕೊಂಡಿರುತ್ತದೆ.

ನಂದಿಗಿರಿಯ ದಕ್ಷಿಣ ಭಾಗದಲ್ಲಿ ದಿವ್ಯಗಿರಿ ಇದ್ದು, ಇವುಗಳೆರಡರ ಮಧ್ಯೆ ಬ್ರಹಗಿರಿ ನೆಲೆಗೊಂಡಿದೆ. ದೊಡ್ಡಬಳ್ಳಾಪುರ ರಸ್ತೆಯಲ್ಲಿ ನಂದಿಬೆಟ್ಟದ ಕ್ರಾಸಿನ ಬಳಿ ಪಶ್ಚಿಮಾಭಿಮುಖವಾಗಿ ನಿಂತರೆ ಎಡಕ್ಕೆ ದಿವ್ಯಗಿರಿ,

ಬಲಕ್ಕೆ ಬ್ರಹ್ಮಗಿರಿ ಬರುತ್ತವೆ. ನಂದಿಗಿರಿಯ ಉತ್ತರ ಭಾಗದಲ್ಲಿ ವಿಷ್ಣುಗಿರಿ ಇದ್ದು, ವಿಷ್ಣುಗಿರಿಯ ಉತ್ತರ ಭಾಗದಲ್ಲಿ ಸ್ಕಂದಗಿರಿ ಬರುತ್ತದೆ ಸ್ಕಂದಗಿರಿ ಅಥವಾ ಕಳವಾರಬೆಟ್ಟ ಚಿಕ್ಕಬಳ್ಳಾಪುರ ನಗರಕ್ಕೆ ಪಶ್ಚಿಮ ದಿಕ್ಕಿನಲ್ಲಿ ೩ ಕಿಮೀ ದೂರುದಲ್ಲಿದ್ದು ಪಾಪಾಘ್ನಿ ಮಠದಿಂದಾಗಿ ಖ್ಯಾತಿ ಪಡೆದಿದೆ.

ನಂದಿ ಕ್ಷೇತ್ರದ ಮಹಾತ್ಮೆಯನ್ನು ಬ್ರಹ್ಮಾಂಡ ಪುರಾಣದಲ್ಲಿ ೮೦ನೇ ಅಧ್ಯಾಯದಿಂದ 106ನೇ ಅಧ್ಯಾಯದವರಿಗೆ ವಿವರಿಸಲಾಗಿದೆ. ನಂದಿದುರ್ಗದ ಪೂರ್ವದಿಕ್ಕಿನಲ್ಲಿರುವ ನೆಲ್ಲಿಕಾಯಿ ಬಸವನ ಗುಡಿಗೆ ಉತ್ತರದ ಗುಹೆಯಲ್ಲಿರುವ ಒಂದು ಶಾಸನದ ರೀತ್ಯ ಶ್ರೀಶೈಲ ಪರ್ವತದಿಂದ ಆಗಮಿಸಿದ ಒಬ್ಬ ಶಿವಯೋಗಿಯೂ ಇಲ್ಲಿ ನೆಲೆಸಿದ್ದರೆಂದು ಅಧ್ಯಯನದಿಂದ ತಿಳಿದುಬರುತ್ತದೆ. ಸ್ಥಳ ಪುರಾಣದ ಪ್ರಕಾರ ಹಿಂದೆ ಇಲ್ಲಿ ಕೂಷ್ಮಾಂಡ ಋಷಿಯು ಆಶ್ರಮವನ್ನು ಸ್ಥಾಪಿಸಿದನು. ಆ ಮುಖೇನ ಈ ಋಷಿಯು ತಪಸ್ಸು ಮಾಡಿಕೊಂಡಿದ್ದುದರಿಂದ ನಂದಿಗಿರಿಯನ್ನು ಕೂಷ್ಮಾಂಡ ಪರ್ವತವೆಂದೂ ಅಥವಾ ಇನ್ನೊಂದು ಹೆಸರು ಶೃಂಗಿಪರ್ವತ ಎಂಬಂಥ ಹೆಸರಿನಿಂದಲೂ ಕರೆಯಲಾಗುತ್ತಿದ್ದಿತೆಂದು ತಿಳಿದುಬರುತ್ತದೆ. ಅದನ್ನೇ ಸ್ಥಳೀಯರು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಬ್ರಹ್ಮಾಂಡ ಪುರಾಣದಲ್ಲಿ ಬರುವ ಆ ಕಥೆ ಹೀಗಿದೆ. ಕೂಷ್ಮಾಂಡನೆಂಬ ಈಶ್ವರನ ಧೂತನು ಕೈಲಾಸದಲ್ಲಿರುತ್ತಾನೆ. ಇವನಿಗೆ ಕೈಲಾಸದಲ್ಲಿ ಇರುವ ಪ್ರಥಮಗಣಗಳಿಗೆ ಅಧಿಪತಿ ಆಗಬೇಕೆಂಬ ಮನೋಭಾವವು ಉಂಟಾಯಿತು. ತನ್ನ ಈ ಆಸೆಯನ್ನು ಈಡೇರಿಸಿಕೊಳ್ಳುವ ಇಚ್ಛೆಯಿಂದ ತಪಸ್ಸನ್ನಾಚರಿಸುವ ಸಲುವಾಗಿ ಸೂಕ್ತ ಸ್ಥಳವನ್ನು ಅರೆಸುತ್ತಾ ಭೂ ಲೋಕಕ್ಕೆ ಭೂಮಿಗೆ ಬರುತ್ತಾನೆ. ಉನ್ನತ ಪ್ರದೇಶದಲ್ಲಿ ನೆಲೆಗೊಂಡಿರುವ ಪಂಚಗಿರಿಗಳ ಬಳಿ ಬರಲು ಅಲ್ಲಿಯ ರಮ್ಯ–ಪ್ರಶಾಂತವಾದ ವಾತಾವರಣವನ್ನು ಕಂಡು ಸಂತಸಗೊಂಡು ತನ್ನ ತಪೋಸಿದ್ಧಿಗೆ ಪ್ರಶಸ್ಥವಾದ ಸ್ಥಳ ಇದೆಂದು ನಿರ್ಧರಿಸಿದ್ದನು. ಹಾಗೆಯೇ, ಈ ಪಂಚಗಿರಿಗಳನ್ನೊಮ್ಮೆ ಪೂರ್ಣವಾಗಿ ವೀಕ್ಷಿಸಲಾಗಿ ಅಮೃತಸರಸು ಇರುವ ಗಿರಿಯಲ್ಲಿ ತಾನು ತಪಸ್ಸನ್ನು ನಿರಾತಂಕವಾಗಿ ಕೈಗೊಳ್ಳಬಹುದೆಂದು ಅಚಲವಾಗಿಯೇ ನಿಶ್ಚಯಿಸಿದನು. ಅನಂತರ ಬೃಹ್ಮೀ ಮೂಹೂರ್ತದಲ್ಲಿ ಎದು ಅಮೃತ ಸರಸಿನಲ್ಲಿ ಮಿಂದು ಶ್ರೀಮಹಾವಿಷ್ಣುವನ್ನು ಕುರಿತು ಘೋರ ತಪಸ್ಸಿಗೆ ತೊಡಗುವನು. ಆವಾಗ ವೈಕುಂಠನಾತನು ಕೂಷ್ಮಾಂಡ ಮುನಿಯ ತಪಸ್ಸಿಗೆ ಮೆಚ್ಚಿ ಪ್ರತ್ಯೇಕ್ಷನಾಗಿ ವರವನ್ನು ಬೇಡಲು, ಕೂಷ್ಮಾಂಡ ಮುನಿಯು ತಾನು ಕೈಲಾಸದ ಪ್ರಥಮಗಣಗಳಿಗೆ ಅಧಿಪತಿಯಾಗಬೇಕು ಮತ್ತು ತಾನು ತಪಸ್ಸನ್ನಾಚರಿಸಿದ ಈ ಗಿರಿ ತನ್ನ ಹೆಸರಿನಿಂದಲೇ ಪ್ರಸಿದ್ಧಿಯಾಗಬೇಕೆಂದು ನಮ್ರತೆಯಿಂದಲೇ ಪ್ರಾರ್ಥಿಸಿದನು. ಅಂದಿನಿಂದ ಈ ಗಿರಿಯು ಕೂಷ್ಮಾಂಡ ಪರ್ವತವೆಂಬ ಹೆಸರಿನಿಂದ ಖ್ಯಾತಿ ಪಡೆಯಿತು.

ಕೂಷ್ಮಾಂಡಗಿರಿಯು ತದನಂತರದಲ್ಲಿ ನಂದಿಗಿರಿ ಎಂಬ ಹೆಸರು ಪಡೆದದ್ದು ಸಹ ಒಂದು ಪೂರ್ಣ ಕಥನವೇ ಆಗಿರುತ್ತದೆ. ಕೈಲಾಸದಲ್ಲಿ ಪರಶಿವನು ತನ್ನ ಸಮಸ್ತ ಗಣಗಳ, ಮುನಿಗಳ ಮತ್ತು ಭಕ್ತರ ಸ್ತುತಿ, ಸ್ತೋತ್ರ, ವೇದ ಘೋಷಣೆಗಳಿಂದ ಸಂಪ್ರೀತನಾಗಿ ತನ್ನ ಈ ಭಕ್ತರಿಗೆ ಅಪಾರವಾದ ಪ್ರೀತಿಯನ್ನು ತೋರಿಸುತ್ತಾ, ಅವರನ್ನು ಆಧರಿಸುತ್ತಾ ಇರುವ ಸಂದರ್ಭದಲ್ಲಿ ಶಿವನ ಅರ್ಧಾಂಗಿಯಾಗಿರುವಂಥ ಶಿವೆಗೆ ತನ್ನ ಪ್ರಾಣೇಶ್ವರನು ತನ್ನ ಮೇಲೆ ಅಪಾರವಾದ ಪ್ರೇಮವನ್ನು ಇಟ್ಟಿದ್ದಾನೋ? ಅಥವಾ ಭಕ್ತರ ಮೇಲೆ ಅಗಣಿತವಾದ ಪ್ರೇಮಾಭಿಮಾನವನು ಹೊಂದಿದಾನೋ? ಎಂಬುದನ್ನು ಪರೀಕ್ಷಿಸುವ ಸಲುವಾಗಿ ಅರ್ಧನಾರಿಶ್ವರನೊಂದಿಗೆ ಕಲಹವನ್ನು ಮಾಡಿಕೊಂಡು ಆದಿಪರಾಶಕ್ತಿಯು ಅಪರಾವತಾರಿಯೂ ಆದ ಗಿರಿಜೆಯು ಪತಿಯನ್ನು ತೊರೆದು ತನ್ನ ಪರಿವಾರದೊಂದಿಗೆ ಇಂದ್ರೋದ್ಯಾನಕ್ಕೆ ಬಂದಳು. ಮಹೇಶ್ವರನು ಕೈಲಾಸದಲ್ಲಿ ಸತಿಯ ಅಗಲಿಕೆಯ ನೋವನ್ನು ಸಹಿಸಲಾರದಾದ ಪಾರ್ವತಿಯಿಲ್ಲದೇ ಕೈಲಾಸ ಶೂನ್ಯವೆಂದು ಬಗೆದು ಸಮಸ್ತ ಭಕ್ತಗಣಗಳಿಗೆ ಇದರ ಅಭಾವ ತಟ್ಟದಿರಲಿ ಎಂದು ಸಂಕಲ್ಪಿಸಿ, ಕೂಡಲೇ ಪಾರ್ವತಿಯನ್ನು ಕೈಲಾಸಕ್ಕೆ ಕರೆತರಲು ತನ್ನ ಪ್ರೀತಿಯ ಕಿಂಕರನಾದ ನಂದಿಯೊಂದಿಗೆ ಹೇಳುತ್ತಾನೆ. ಕೈಲಾಸನಾಥನ ಅಣತಿಯಂತೆ ಪಾರ್ವತಿಯನ್ನು ಹುಡುಕುತ್ತಾ; ನಂದಿಯು ಗಣಗಳೊಂದಿಗೆ ಇಂದ್ರೋದ್ಯಾನಕ್ಕೆ ಬರುತ್ತಾನೆ. ಮಹಾಶಿವನ ಒಡ್ಡೋಲಗವೇ ಬಂದಿತೆಂದು ಭ್ರಮಿಸಿದ ಪಾರ್ವತಿಯ ಪರಿಚಾರಿಕೆಯರು ಅತ್ಯಂತ ಸಡಗರದಿಂದ ಒಡತಿಗೆ ಈ ವಿಷಯವನ್ನು ತಿಳಿಸುತ್ತಾರೆ. ತನ್ನ ಗಣಗಳೊಂದಿಗೆ ಮುಕ್ಕಣ್ಣನೂ ಬಂದನೆಂದು ಶಿವೆಯು ಸಂಭ್ರಮಿಸುತ್ತ, ತನ್ನ ಪ್ರಾಣ ವಲ್ಲಭನನ್ನು ಕಾಣುವ ಕಾತುರದಲ್ಲಿ ಒಡ್ಡೋಲಗ ಸಹಿತ ಬರುತ್ತಿರುವ ನಂದಿಯನ್ನು ನೋಡಿ ಶಿವನೇ ಎಂದು ಭ್ರಮಿಸುತ್ತಾಳೆ. ಭ್ರಮಿಸಿ ನಿರಾಶೆಯಿಂದ ಬೆಚ್ಚಿನಿಂತ ಜಗಜ್ಜನನಿಯನ್ನು ನೋಡಿದ ನಂದಿಯು, ತಾಯಿ ನಿನ್ನ ಸುತನಾದ ನಾನು ಪರಮಶಿವನ ಅಣತಿಯಂತೆ ಕೈಲಾಸಕ್ಕೆ ನಿಮ್ಮನ್ನು ಕರೆದೊಯ್ಯಲು ಬಂದಿದ್ದೇನೆ. ನಿಮ್ಮ ಈ ತೆರನಾಗಿರುವಂಥ ವಿರಹವು ಶಿವನನ್ನು ತೇಜೋಹೀನನನ್ನಾಗಿ ಮಾಡಿದೆ. ಕೈಲಾಸನಾಥನ ಚೈತನ್ಯವೇ ಉದುಗಿ ಹೋದಂತಾಗಿದೆ. ಪಣಿಭೂಷಣನ ಆತ್ಮಶಕ್ತಿಯಾಗಿ, ಪ್ರೇಮಸ್ವರೂಪಿಣಿಯಾಗಿ ಆದಿದೇವತೆಯಾದ ನೀವು ಕೈಲಾಸಕ್ಕೆ ಮರಳಿ ಬಾ ತಾಯಿ ಎಂದು ಅನಂತತೆಯ ನಮ್ರತೆಯಿಂದಲೇ ನಂದಿಯೂ ಪ್ರಾರ್ಥಿಸಿದ್ದನು.

ಗಂಗಾಧರನ ಅತ್ಯಂತ ಪ್ರೀತಿಪಾತ್ರನಾದ ನಂದಿಯ ಮಾತನ್ನು ಕೇಳಿ, ಪತಿಯನ್ನು ಆಗಲಿ ಬಂದುದ್ದಕ್ಕೆ ಬಲುನೊಂದು, ಕೈಲಾಸಕ್ಕೆ ಎಲ್ಲರು ಪ್ರಯಾಣಿಸುವ ಸಮಯದಲ್ಲಿ ನಂದಿಯು ಖಿನ್ನನಾಗಿ ಪಾರ್ವತಿಯನ್ನು ಕುರಿತು; ತಾಯಿ ಪರಿಚಾರಿಕೆಯರ ಮಾತನ್ನು ನಂಬಿ ಶಿವನೇ ಇಲ್ಲಿಗೆ ಬಂದಿದ್ದಾನೆಂದು ನೀವು ಭ್ರಮಿಸಿದ್ದರಿಂದ ನನ್ನಿಂದ ಮಹದಪರಾದವಾಯಿತು. ಇದರ ಪ್ರಾಯಶ್ಚಿತ್ತಕ್ಕಾಗಿ ತಪಸ್ಸನ್ನು ಆಚರಿಸಲು ತೆರಳುತ್ತೇನೆ ಎಂದು ಭಿನ್ನೈಸಿಕೊಳ್ಳುತ್ತಾನೆ. ಆಗ ಪಾರ್ವತಿಯು 'ಸುತನ ಸಮಾನನಾದ ನಿನಗೆ ಆ

ದೋಷವು ತಟ್ಟುವುದಾದರೆ, ನನಗೂ ಸಹ ಸಂಕ್ರಮಿಸುವುದು. ಅದರ ಪರಿಹಾರಾರ್ಥವಾಗಿ ನಾನೂ ಸಹ ತಪಸ್ಸಿಗೆ ತೆರಳುತ್ತೇನೆ' ಎಂದು ಹೇಳಿದ ಪಾರ್ವತಿಯು ತಾನೂ ತಪಸ್ಸನ್ನಾಚರಿಸಲು ಹೋಗುವಳು. ವ್ಯಾಕುಲ ಚಿತ್ತನಾದ ನಂದಿಯು ಶಿವಗಣದೊಂದಿಗೆ ಪ್ರಯಾಣಿಸುತ್ತಾ ನಿಮ್ಮಲ್ಲಿ ಯಾರಾದರೂ ತನಗೆ ಉಂಟಾದ ದೋಷ ನಿವಾರಣಾರ್ಥವಾಗಿ ತಪಸ್ಸನ್ನು ಆಚರಿಸಲು ಸೂಕ್ತವಾದ ಸ್ಥಳವನ್ನು ತಿಳಿಸುವಿರಾ.....? ಎಂದು ಕೇಳಿದಾಗ ಕೂಷ್ಮಾಂಡ ಗಣಾಧಿಪತಿಯೂ ತಾನು ಹಿಂದೆ ತಪಸ್ಸಾಚರಿಸಿ ಸಿದ್ಧಿ ಪಡೆದ ಪಂಚಗಿರಿಗಳ ಬಗೆಗೆ ವಿವರಿಸಿದನು. ಆ ದಿವ್ಯಕ್ಷೇತ್ರದಲ್ಲಿ ನೀನು ತಪಸ್ಸನ್ನಾಚರಿಸಿದರೆ ನಿನಗೂ ದೋಷವು ಪರಿಹಾರವಾಗುವುದು ಎಂದು ತಿಳಿಸಿದನು. ಆಗ ನಂದಿಯು ಕೂಷ್ಮಾಂಡಗಿರಿಗೆ ಬಂದು ಅಮೃತ ಸರಸ್ಸಿನಲ್ಲಿ ಮಿಂದು ಈ ಪರ್ವತದ ಈಶಾನ್ಯ ದಿಕ್ಕಿನ ಮೂಲಭಾಗದಲ್ಲಿ ಬಂದು ತನ್ನ ಶೃಂಗಗಳಿಂದ ಬಗೆದು ತೀರ್ಥವನ್ನು ನಿರ್ಮಿಸಿ ಅದರಲ್ಲಿ ಮಿಂದು ತಪಸ್ಸಿಗೆ ಕುಳಿತನು. ಈ ಸರಸೆ ಮುಂದೆ 'ಶೃಂಗ ತೀರ್ಥ' ವೆಂದು ಹೆಸರು ಪಡೆಯಿತು.

ನಂದಿಯು ಕೂಷ್ಮಾಂಡ ಗಿರಿಗೆ ಬಂದ ಕೂಡಲೇ ಅವನು ಒಂದು ದೊಡ್ಡ ಗೂಳಿಯಾಗಿ ಬದಲಾವಣೆ ಹೊಂದಿದನು. ಇದೇ ಸಮಯದಲ್ಲಿ ಭೂ ಲೋಕದಲ್ಲಿ ಮಳೆಬೇಳೆಗಳಿಲ್ಲದೇ ಕ್ಷಾಮವುಂಟಾಯಿತು. ಆಗ ದೇವಲೋಕದ ಕಾಮಧೇನು ಭೂಲೋಕಕ್ಕೆ ಬಂದು ನಂದಿಯನ್ನು ಸೇರಿತು. ನಂದಿ ಮತ್ತು ಕಾಮಧೇನುಗಳ ಸಮಾಗಮದಿಂದ ಸಹಸ್ರಾರು ಕರುಗಳು ಹುಟ್ಟಿದವು. ಕಾಮಧೇನುವು ತನ್ನ ಮಕ್ಕಳಿಗಾಗಿ ಕೆಚ್ಚಲಿನಿಂದ ಧಾರಾಕಾರವಾಗಿ ಹಾಲು ಸುರಿಸಿತು. ಈ ಕ್ಷೀರ ಪ್ರವಾಹವೇ ಕ್ಷೀರನದಿ–ಪಾಲಾರ್, ಕ್ಷಾಮಪೀಡಿತ ಜನ ಹಾಲನ್ನು ಕುಡಿದು ಸಂತೃಪ್ತರಾದರು. ನಂದಿಯು ತಪಸ್ಸು ಮಾಡಿದ ಬೆಟ್ಟ ನಂದಿಗಿರಿ ಎಂದು ಪ್ರಸಿದ್ಧವಾಯಿತು.

ನಂದಿನಾಧುಷ್ಟಿತೋ ಯಸ್ಮಾತ್ ಸರ್ವೈ ನಂದಿಗಿರಿ: ಸ್ಮೃತ: ಕ್ಷೀರ ಪೂರೇಣು ಮಹಾತಾ ನಂದಿನಾಮೋ ಮಹಾಗಿರೇ ಆ ಗಿರಿಯಲ್ಲಿ ನಂದಿಯು ವಾಸ ಮಾಡಿದ ನಿಮಿತ್ತ ಅದು ನಂದಿಗಿರಿಯೆಂಬ ಅನ್ವರ್ಥ ನಾಮವನ್ನು ಹೊಂದಿತು. ಆ ನಂದಿ ಪರ್ವತದಿಂದ ಕ್ಷೀರದ ಮಹಾ ಪ್ರವಾಹವು ಉಂಟಾಯಿತು. ಈ ನಂದಿಗಿರಿಯು ಒಂದು ಭಾಗದಲ್ಲಿ ಲಿಂಗಾಕೃತಿಯೂ ಮತ್ತೊಂದು ಭಾಗದಲ್ಲಿ ವೃಷಭಾಕೃತಿಯಾಗಿ ಕಾಣಿಸುವುದೊಂದು ವಿಶೇಷ. ಬ್ರಹಗಿರಿಯ ಬಗೆಯೂ ಒಂದು ಪುರಾಣ ಪ್ರಸಂಗ ಪ್ರಚಲಿತದಲ್ಲಿರುತ್ತದೆ. ಅದನ್ನು ಈ ಮುಂದಿನಂತೆ ಚರ್ಚಿಸಲಾಗಿದೆ. ಅದೇನೆಂದರೆ;

**ಬ್ರಹ್ಮಗಿರಿ**

ಒಮ್ಮೆ ದೇವಲೋಕದಲ್ಲಿ ದೇವತೆಗಳ ಮಹಾಸಭೆ ಏರ್ಪಾಟಾಗಿದ್ದಿತ್ತು. ಈ ಸಭೆಯಲ್ಲಿ ಬ್ರಹ್ಮ, ವಿಷ್ಣು ಇವರುಗಳಲ್ಲಿ ತಮ್ಮಲ್ಲಿ ಯಾರು ಶ್ರೇಷ್ಠರು ಎಂಬ ಬಗೆಗೆ ಭಿನ್ನಾಭಿಪ್ರಾಯವನ್ನು ಬಿಡಿಸಿ ಹೇಳಲು ದೇವತೆಗಳು

ಕೈಲಾಸದಲ್ಲಿ ಪಾರ್ವತಿಯೊಡನೆ ಧ್ಯಾನಮಗ್ನನಾಗಿದ್ದ ಪಶುಪತಿಯ ಮೊರೆ ಹೋಗುತ್ತಾರೆ. ಆಗ ಪರಮಶಿವನು ಇಂದ್ರಾಧಿ ದೇವತೆಗಳೊಡನೆ ಮಹಾಸಭೆಗೆ ಬಂದು ಬ್ರಹ್ಮ-ವಿಷ್ಣುಗಳ ವಾದವನ್ನು ಆಲಿಸಿ ಅವರ ದುರಾಭಿಮಾನವನ್ನು ಹೋಗಲಾಡಿಸುವ ಸಲುವಾಗಿ ವಿಶ್ವರೂಪವನ್ನು ತಾಳಿದನು. ಆಗ ಪರಮಶಿವನು "ಎಲೈ ಬ್ರಹ್ಮ ವಿಷ್ಣುವಿರೇ ನಿಮ್ಮೀರ್ವರಲ್ಲಿ ಒಬ್ಬರು ನನ್ನ ಪಾದವನ್ನೂ ಮತ್ತೊಬ್ಬರು ಶಿರದ ಮೂಲವನ್ನೂ ನೋಡಿಕೊಂಡು ಬನ್ನಿರಿ. ಯಾರು ಪಾದದ ಮೂಲವನ್ನಾಗಲೀ, ಶಿರದ ಮೂಲವನ್ನಾಗಲೀ ನೋಡಿಕೊಂಡು ಮೊದಲು ಬರುವರೋ ಅವರೇ ಶ್ರೇಷ್ಟರು: ಎನ್ನಲು, ವಿಷ್ಣುವು ಪಾದದ ಮೂಲವನ್ನೂ ಬ್ರಹ್ಮನು ಶಿರದ ಮೂಲವನ್ನೂ ಹುಡುಕಿಕೊಂಡು ಹೋಗುವರು. ಎಷ್ಟೋ ವರ್ಷಗಳ ಕಾಲ ವಿಷ್ಣುವು ಪಾದಮೂಲವನ್ನು ಹುಡುಕಿಕೊಂಡು ಹೋದರೂ ಮೂಲವು ಕಾಣದೇ ಹೋದುದರಿಂದ ಶಿವನ ಬಳಿಗೆ ಬಂದು ತನಗೆ ಪಾದಮೂಲವು ದೊರೆಯಲಿಲ್ಲವೆಂದು ತಿಳಿಸಿದನು.

ಅತ್ತ ಬ್ರಹ್ಮನು ಶಿರದ ಮೂಲವನ್ನು ಹುಡುಕುತ್ತಾ; ಎಷ್ಟೋ ಕಾಲ ಪ್ರಯಾಣಿಸಿದರನು. ಹಾಗೆಯೇ ಹೋಗುತ್ತಿರಲು ಒಂದು ಕೇತಕಿಯು ಎದುರಿನಿಂದ ಬರುತ್ತಿರುವುದನ್ನು ಕಂಡು ಬ್ರಹ್ಮನು " ಎಲೈ ಪುಷ್ಪವೇ ನೀನು ಎಲ್ಲಿಂದ ಬರುತ್ತಿರುವೇ? ಎಂದು ಪ್ರಶ್ನೆ ಮಾಡಿದನು ಆಗ ಕೇತಕಿಯು ನಾನು ಶಿವನ ಜಟೆಯಿಂದ ಉದುರಿ ಕೆಳಗೆ ಬರುತ್ತಿದ್ದೇನೆ, ಎಷ್ಟೋ ಕಾಲ ಸಂದರೂ ಇನ್ನೂ ಭೂಮಿಯು ಸಿಗಲಿಲ್ಲ ಎಂದಿತು. ಆಗ ಬ್ರಹ್ಮನು ತನ್ನ ಪರಿಸ್ಥಿತಿಯನ್ನು ವಿವರಿಸಿ, ನಾವಿಬ್ಬರೂ ಶಿವನ ಬಳಿ ಹೋಗೋಣ. ನಾನು ಶಿವನ ಶಿರದ ಮೂಲವನ್ನು ನೀಡಿದೆ ಎಂದು ಹೇಳುತ್ತೇನೆ. ನೀನು ಅದಕ್ಕೆ ಸಾಕ್ಷಿಯನ್ನು ಹೇಳಬೇಕು ಎನ್ನಲು, ಕೇತಕಿಯು ಶಿವನ ಸಮ್ಮುಖದಲ್ಲಿ ಅನೃತವನ್ನು ನುಡಿಯಲು ಒಪ್ಪಲಿಲ್ಲ. ಸೃಷ್ಟಿಕರ್ತನಾದ ತನ್ನ ಪರವಾಗಿ ಸುಳ್ಳು ಹೇಳುವುದರಿಂದ ಯಾವುದೇ ಪಾಪವು ಉಂಟಾಗುವುದಿಲ್ಲ. ನೀನು ನಿರ್ಭಯವಾಗಿ ಸಾಕ್ಷವನ್ನು ಹೇಳು ಎಂದು ಬ್ರಹ್ಮನು ಬಲವಂತ ಪಡಿಸಿದ ಮೇಲೆ ಇಬ್ಬರು ಶಿವನ ಬಳಿಗೆ ಬಂದರು.

ಬ್ರಹ್ಮನು ಶಿವನ್ನು ಕುರಿತು ನಾನು ನಿನ್ನ ಶಿರದ ಮೂಲವನ್ನು ನೋಡಿದೆ. ಇದಕ್ಕೆ ಈ ಕೇತಕಿಯೆ ಸಾಕ್ಷಿ ಎನ್ನಲು, ಶಿವನಿಗೆ ಸತ್ಯದ ಗೋಚರವಾಗಿ "ಎಲೈ ಕೇತಕಿಯೆ ಬ್ರಹ್ಮನು ನನ್ನ ಶಿರದ ಜಟೆಯ ಭಾಗವನ್ನು ನೋಡೊದನೆ"? ಎಂದು ಪ್ರಶ್ನೆ ಮಾಡಿದನು. ಕೇತಕಿಯು ಶಿವನೊಡನೆ ಸುಳ್ಳನ್ನು ಸಮರ್ಥಿಸಿಕೊಳ್ಳಲಾಗದೆ ತನ್ನ ತಪ್ಪನ್ನು ಒಪ್ಪಿಕೊಂಡಿತ್ತು. ಉಗ್ರನಾದ ರುದ್ರನು ಕೇತಕಿಯನ್ನು ಇನ್ನು ಮುಂದೆ ಪೂಜೆಗೆ ಅನರ್ಹನಾಗು ಎಂದು ಶಪಿಸಿದನು. ಕೇತಕಿಯು ಭಯದಿಂದ ನಡುಗುತ್ತಾ ಭಕ್ತಿಯಿಂದ ತನ್ನ ತಪ್ಪನ್ನು ಮನ್ನಿಸಬೇಕೆಂದು ಕೇಳಿಕೊಳ್ಳಲು, ಶಾಂತನಾದ ಶಿವನು ತನ್ನ ಶಪವನ್ನು ಉಪಸಂಹರಿಸುತ್ತಾ, ಲಕ್ಷ್ಮೀ ವಿಷ್ಣುಮಯವಾದ ದೇವತೆಗಳ ಪೂಜಾ ಸಮಯದಲ್ಲಿ ನಿನ್ನ ಗರ್ಭವನ್ನು ಭೇದಿಸಿದರೆ ಪೂಜಾರ್ಹವಾಗುವೆ. ಆದರೆ ನನ್ನ ಪೂಜೆಗೆ ನೀನು ಎಂದಿಗೂ ಅನರ್ಹ ಎಂದನು. ಆನಂತರ ಎಲೈ

ಅನೃತವನ್ನಾಡಿದ ಬ್ರಹ್ಮನೆ ನಿನಗೆ ದೇವಾಲಯದಲ್ಲಿ ಎಂದಿಗೂ ಪೂಜೆಯು ದೊರೆಯದೆ ಹೋಗಲಿ ಎಂದನು. ಆಗ ಬ್ರಹ್ಮನು ನಡಗುತ್ತ ಶಿವನನ್ನು ಪರಿಪರಿಯಾಗಿ ಬೇಡಿಕೊಳ್ಳಲು ಶಾಂತನಾದ ಪರಮಶಿವನು ನೀನು ಭೂಲೋಕದ ನಂದಿಗಿರಿಗೆ ತೆರಳಿ ಅದರ ದಕ್ಷಿಣ ಭಾಗದಲ್ಲಿರುವ ಗಿರಿಯಲ್ಲಿ ತಪಸ್ಸನ್ನು ಆಚರಿಸಿದರೆ ಅನೃತವಾಡಿದ ಪಾಪದಿಂದ ಮುಕ್ತನಾಗಿ ಶ್ರೌತಸ್ಮಾರ್ಥಾದಿ ಕರ್ಮಗಳಲ್ಲಿ ಪೂಜಾರ್ಹವಾಗುವೆ ಎಂದು ಹೇಳಿದನು.

ಬ್ರಹ್ಮನು ನಂದಿಗಿರಿಯ ದಕ್ಷಿಣಭಾಗದ ಗಿರಿಯಲ್ಲಿ ತಪಸ್ಸನ್ನು ಮತ್ತು ಯೋಗಗಳನ್ನು ಆಚರಿಸಲು, ಗಿರಿಜಾಪತಿ ವೃಷಭಾರೂಢನಾಗಿ ಬಂದು ಬ್ರಹ್ಮನನ್ನು ಕರುಣಿಸಿದನು. ನಿನಗೆ ಶ್ರೌತಸ್ಮಾರ್ಥಾದಿ ಕರ್ಮಗಳಲ್ಲಿ ಪೂಜೆಯ ಅಹುತಿ ಭಾಗಗಳು ದೊರೆಯುವುವು. ಆದರೆ, ಪ್ರತಿಮೆ ರೂಪದಲ್ಲಿ ಮಾತ್ರ ಲಭಿಸುವುದಿಲ್ಲ. ನೀನು ಇಲ್ಲಿ ತಪಸ್ಸನ್ನು ಆಚರಿಸುವುದರಿಂದ ಈ ಶೈಲವು ನಿನ್ನ ಹೆಸರಿನಿಂದ ಪ್ರಖ್ಯಾತಿಯಾಗುವುದು. ಪತ್ನಿ ಸಮೇತನಾಗಿ ಈ ಗಿರಿಯಲ್ಲಿ ಸಾನಿಧ್ಯವನ್ನು ಮಾಡಲಾಗಿದೆ. ಈ ಬ್ರಹ್ಮಗಿರಿಯನ್ನು ಭಕ್ತಿಯಿಂದ ಸಂದರ್ಶಿಸಿ ಇಲ್ಲಿರುವ ಸರಸ್ಸಿನಲ್ಲಿ ಮಿಂದು ಭಕ್ತರು ಸಕಲ ಪಾಪಗಳಿಂದ ಮುಕ್ತರಾಗುತ್ತಾರೆ ಎಂದು ಹಾರೈಸಿದನು.

**ವಿಷ್ಣುಗಿರಿ**

ಪೂರ್ವದಲ್ಲಿ ವಿಷ್ಣುಮೂರ್ತಿ ಎಂಬ ಮುನಿಶ್ರೇಷ್ಠನು ಈ ಗಿರಿಯಲ್ಲಿ ತಪಸ್ಸನ್ನು ಆಚರಿಸಿದಾಗ, ಮಹಾವಿಷ್ಣುವು ಪ್ರತ್ಯೇಕ್ಷನಾಗಿ ವರಗಳನ್ನಿತ್ತನು. ಅಂದಿನಿಂದ ನಂದಿಗಿರಿಯ ಉತ್ತರ ಭಾಗದಲ್ಲಿರುವ ಈ ಗಿರಿಯು ವಿಷ್ಣುಗಿರಿ ಎಂಬ ಅಭಿದಾನದಿಂದ ಹೆಸರು ಪಡೆಯಿತು. ನಂದಿಗಿರಿ ಮತ್ತು ಈ ಗಿರಿಯ ಸಂಗಮದ ಕಣಿವೆಯ ಪ್ರದೇಶದಲ್ಲಿಯೇ ಕಣಿವೆ ಬಸವ ನೆಲೆಸಿರುವುದೊಂದು ವಿಶೇಷವೇ ಆಗಿರುತ್ತದೆ.

**ದಿವ್ಯಗಿರಿ**

ಬ್ರಹ್ಮಗಿರಿಯ ದಕ್ಷಿಣ ಭಾಗದಲ್ಲಿರುವ ಈ ಗಿರಿಯಲ್ಲಿ ಗ್ರಹನ ಆದೇಶದಂತೆ ದೇವತೆಗಳು ಲೋಕಕಲ್ಯಾಣಕ್ಕಾಗಿ ತಪಸ್ಸನ್ನು ಆಚರಿಸಿ ಹರನ ಅನುಗೃಹದಿಂದ ದೈತ್ಯರನ್ನು ಕೊಂದು, ಪುನಃ ಈ ಗಿರಿಯಲ್ಲಿ ತಪಸ್ಸು ಮಾಡಿ ದಿವ್ಯ ಶಕ್ತಿಗಳನ್ನು ಪಡೆದುದರಿಂದ ಈ ಗಿರಿಗೆ ದಿವ್ಯಗಿರಿ ಎಂದು ಹೆಸರಾಯಿತು.

**ಸ್ಕಂದಗಿರಿ (ಕಳವಾರ ದುರ್ಗ)**

ಪರಮಶಿವನ ಮಗನಾದ ಸ್ಕಂದನು ಬ್ರಹ್ಮರಾಕ್ಷಸರಾದ ತಾರಕಾಸುರನನ್ನು ಸಂಹರಿಸಿದಾಗ ಬ್ರಹ್ಮಹತ್ಯೆ ದೋಷವುಂಟಾಗುತ್ತದೆ. ಇದರ ಪರಿಹಾರಕ್ಕಾಗಿ ಕುಮಾರಸ್ವಾಮಿ ವಿಷ್ಣುಗಿರಿಯ ಉತ್ತರ ಭಾಗದಲ್ಲಿರುವ ಗಿರಿಯಲ್ಲಿ ತಪಸ್ಸು ಮಾಡಲು ಉಪಕ್ರಮಿಸಿದಾಗ, ಕಠೋರ ತಪಸ್ಸಿನ ಜ್ವಾಲೆ ಜಗತ್ತನ್ನೆಲ್ಲಾ ಸುಡುತ್ತಾ ಬರುವುದನ್ನು ಕಂಡು, ಭಯಭೀತರಾದ ದೇವತೆಗಳು ಕೈಲಾಸಪತಿಯ ಮೊರೆ ಹೋಗುತ್ತಾರೆ. ಶಿವನು ವಿಷ್ಣುವಿನ ಕರ್ತವ್ಯವನ್ನು ಬೋಧಿಸಲು, ವಿಷ್ಣುವು ಷಣ್ಮುಖನ ಮುಂದೆ ಪ್ರತ್ಯೆಕ್ಷನಾಗುತ್ತಾನೆ. ಸ್ಕಂದನು ತನ್ನ

ತಪಸ್ಸಿನಿಂದ ಒಂದು ನದಿ ಪ್ರವಹಿಸುವಂತೆ ಮಾಡಿ ಅದಕ್ಕೆ ನಾಮಕರಣ ಮಾಡುತ್ತಾನೆ. ವಿಷ್ಣುವು ಬ್ರಹ್ಮಹತ್ಯಾದೋಷವನ್ನು ಪರಿಹರಿಸಿದ್ದಲ್ಲದೆ, ಕುಮಾರಸ್ವಾಮಿಯ ಇಚ್ಛೆಯಂತೆ ಈ ಕ್ಷೇತ್ರದಲ್ಲಿ ಹರಿಹರೇಶ್ವರರು ಷಣ್ಮುಖೇಶ್ವರನೆಂಬ ಅಭಿದಾನದಿಂದ ನೆಲೆಲ ನಿಂತು ಅಂದಿನಿಂದ ಕುಮಾರಸ್ವಾಮಿ ತಪಗೈದ ಬೆಟ್ಟ ಸ್ಕಂದಗಿರಿ ಎಂಬ ಹೆಸರಿನಿಂದ ಪ್ರಸಿದ್ಧಿಗೊಂಡಿತು.

**ಸ್ಕಂದಗಿರಿ–ಗಣಪತಿಗಿರಿ**

ಅಗಸ್ತ್ಯ ಮುನಿಗಳಿಂದ ಶಪಗ್ರಸ್ಥನಾದ ಗಣಪತಿಯ ಉದರ ಇಬ್ಭಾಗವಾಗಿ ಅನಂತರ ದೇವತೆಗಳ ವಿನಂತಿಯಂತೆ ತಕ್ಷಕನು ಗಜಾನನ ಉದರವನ್ನು ಅಲಂಕರಿಸಿದಾಗ ಇಬ್ಭಾಗವಾಗಿದ್ದ ಉದರ ಸುರೂಪಗೊಂಡ ಕಥೆ ಗೊತ್ತಷ್ಟೇ. ಈ ಘಟನೆಯಿಂದ ವ್ಯಸನ ವದನನಾದ ವಿನಾಯಕನನ್ನು ಪರಮಶಿವನು ಹತ್ತಿರ ಕರೆದು ಪರಮ ಪಾವನನಾದ ನಂದಿಕ್ಷೇತ್ರದಲ್ಲಿರುವ ಸ್ಕಂದಗಿರಿಯಲ್ಲಿ ತಪಸ್ಸು ಆಚರಿಸುವ ಇದರಿಂದ ನಿನಗೆ ಉಂಟಾಗಿರುವ ಶಪವು, ದುಃಖವು ನಿವಾರಣೆಯಾಗುವುದು ಎಂದು ಹೇಳಿದನು. ಪರಮಶಿವನ ಅಣತಿಯಂತೆ ವಿನಾಯಕನು ನಂದಿಕ್ಷೇತ್ರಕ್ಕೆ ಬಂದು ಸ್ಕಂದಗಿರಿಯಲ್ಲಿ ನೆಲಸಿ ಪ್ರತಿದಿನವೂ ಚಿತ್ರಾವತಿ ನದಿಯಲ್ಲಿ ಮಿಂದು ಆದಿಶಂಕರರನನ್ನು ಕುರಿತು ತಪಸ್ಸು ಮಾಡಿದನು. ಶಿವನು ಗಣಪತಿಯ ತಪ್ಸಿಗೆ ಮೆಚ್ಚಿ ಪ್ರತ್ಯೇಕ್ಷನಾದ. ಗಣಪತಿಯು ಅಗಸ್ತ್ಯರ ಶಾಪದಿಂದ ವಿಮುಕ್ತನಾಗುವ ಹಾಗೂ ತಾನು ತಪಗೈದ ಸ್ಥಳವು ತನ್ನ ಹೆಸರಿನಲ್ಲೇ ಖ್ಯಾತಿ ಪಡೆಯಲೆಂಬ ವರವನ್ನು ಪಡೆದನು. ಅಂದಿನಿಂದ ಈ ಹೆಸರನ್ನು ಪಡೆಯಿತು. ಹರಿಹರರು ವಾಸ ಮಾಡುತ್ತಿರುವ ಈ ಕ್ಷೇತ್ರದಲ್ಲಿ ಶಂಕರನೆಂಬ ದೇವಬ್ರಹ್ಮನು ಶ್ರೀಹರಿಯನ್ನು ಕುರಿತು ಯಮುನಾ ನದಿಯಲ್ಲಿ ಸ್ನಾನ ಮಾಡಬೇಕೆಂಬ ಸಂಕಲ್ಪದಿಂದ ಪ್ರಾರ್ಥಿಸಲಾಗಿ ಇದೇ ಸ್ಥಳದಲ್ಲಿ ಯಮುನಾನದಿಯು ಪಾಪಾಘ್ನಿ ನದಿಯಾಗಿ ಉಗಮಿಸಿತೆಂದು ಪುರಾಣಗಳಲ್ಲಿ ಹೇಳಲಾಗಿದೆ. ಈ ಬೆಟ್ಟದ ಮೇಲೆ ಸುತ್ತಲು ಕೋಟೆಯನ್ನು ನಿರ್ಮಿಸಲಾಗಿದೆ. ನಂದಿಗಿರಿಧಾಮದ ಮೇಲೆ ಇರುವಂತೆ ವಿಶಾಲ ಪ್ರದೇಶವಿಲ್ಲದಿದ್ದರೂ, ಮೇಲೆ ವಿನಾಯಕನ ಗುಡಿ ಇದೆ. ಬಹುಶಃ ನಂದಿಗಿರಿಧಾಮದ ಮೇಲೆ ಆವತಿಯ ಪಾಳೆಗಾರರು ಕೋಟೆಯನ್ನು ನಿರ್ಮಿಸಿದ ಕಾಲದಲ್ಲೇ ಇಲ್ಲಿಯೂ ಸೇನಾ ನೆಲೆಯಾಗಿ ಕೋಟೆಯನ್ನು ನಿರ್ಮಿಸಿರಬೇಕು. ಒಂದರ ತಪ್ಪಲಲ್ಲಿಯೇ ಪಾಪಾಘ್ನಿ ಮಠವಿದ್ದು ಇದನ್ನು ಕೂಷ್ಮಾಂಡ ಮುನಿಗಳು ಸ್ಥಾಪಿಸಿದರೆಂಬ ಪ್ರತೀತಿ. ಈ ಋಷಿಗಳಿಗೆ ವೀರಭೋಜಚಾರ್ಯರು ಮತ್ತು ವೀರಪಾಪಮಾಂಬ ಎಂಬ ವಿಶ್ವಕರ್ಮ ದಂಪತಿಗಳು ಮುಖ್ಯ ಶುಷ್ಯರಾಗಿದ್ದರೆಂಬ ಪ್ರತೀತ. ಕಾಲಜ್ಞಾನದಿಂದಾಗಿ ಕೋಕವಂದಿತನಾದ ಶ್ರೀಮದ್ವಿರಾಟ್ ವೀರಬ್ರಹ್ಮೇಂದ್ರಸ್ವಾಮಿ ಈ ದಂಪತಿಗಳ ಸಾಕುಮಗ.

ಹೀಗೆ, ಈ ಚಿಕ್ಕಬಳ್ಳಾಪುರ ತಾಲೋಕಿನ ಚಾರಿತ್ರಿಕ ನೋಟವನ್ನು ಹಲವು ಹತ್ತು ವಿಚಾರಧಾರೆಗಳಂದ ಗ್ರಹಿಸಲಾಗಿರುತ್ತದೆ. ಸಮಕಾಲೀನ ಸಂದರ್ಭದಲ್ಲಿಯೂ ಕೂಡ ಈ ನೆಲದ ಚಾರಿತ್ರಿಕ ನೋಟವೂ ಪ್ರೇಕ್ಷಕರಿಗೆ ಬಲೂರಮಣೀಯವಾದದ್ದೇ ಆಗಿರುತ್ತದೆ.

## ಪರಾಮರ್ಶನ ಗ್ರಂಥಗಳು

1. ಡಾ.ಆರ್.ಗೋಪಾಲ್–ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, – 2004.
2. ಲಕ್ಷಣ ತೆಲಗಾವಿ, ಸ್ಥಳೀಯ ಚರಿತ್ರೆ ಅಧ್ಯಯನದ ತಾಂತ್ರಿಕತೆ ಮತ್ತು ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ, 2003
3. ಚಿತ್ತರಂಜನ್.ಹೆಚ್– ಕೊಲಾರಜಿಲ್ಲಾಗ್ಯಾಸೆಟಿಯರ್ ಬೆಂಗಳೂರು –2005
4. ಗೋಪಾಲಗೌಡಕಲ್ಲಮಂಜಲಿ– ನಂದಿ ಮತ್ತು ರಂಗಸ್ಥಳ ಚಿಕ್ಕಬಳ್ಳಾಪುರ.2014
5. ಚಿದಾನಂದಮೂರ್ತಿ,ಎಂ.–ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂಪುಟ –1, 2002
6. ಡಾ.ಪಿ.ವಿ.ಕೃಷ್ಣಮೂರ್ತಿ–ನಂದಿದುರ್ಗ ಪರಿಸರದ ಶಾಸನಗಳು'ತುಮಕೂರು ವಿಶ್ವವಿದ್ಯಾನಿಲಯ.
7. ವಿ.ವೆಂಕಟಸ್ವಾಮಿ ಆರ್.ಬಿ.– ನಂದಿ ಕ್ಷೇತ್ರ'– ನಂದಿ. ಬೆಂಗಳೂರು– 1983.
8. ಡಾ.ಎಸ್.ಕೆ ಅರುಣಿ–ಯಲಹಂಕದ ನಾಡ ಪ್ರಭುಗಳ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ'